MESCOM-GMAH0ADM/492/2021-GM ADM HR

I/22088/2022 / Date : 28.07.2022

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಮೆಸ್ಕಾಂ
MESCOM

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಂಪನಿ ಗುರುತಿನ ಸಂಖ್ಯೆ: (ಸಿ.ಐ.ಎನ್): ಯು40109ಕೆಎ2002ಎಸ್‌ಜಿಸಿ030425

ಕಂಪನಿಯ ಅಧಿಕೃತ ಕಛೇರಿ: ಆಡಳಿತ ಕಛೇರಿ, 'ಮೆಸ್ಕಾಂ., ಭವನ' ಕಾವೂರು ಅಡ್ಡ ರಸ್ತೆ, ಬಿಜೈ

ಅಂಚೆ ಪೆಟ್ಟಿಗೆ ಸಂಖ್ಯೆ: 1130, ಮಂಗಳೂರು-575004

ಇ-ಮೇಲ್: gm_mescom@rediffmail.com
ಅಂತರ್ಜಾಲ: www.mescom.karnataka.gov.in

ದೂರವಾಣಿ ಸಂಖ್ಯೆ: 0824-2885766

ಸ್ವಾತಂತ್ರ್ಯದ ಅಮೃತ ಮಹೋತ್ಸವ

## ಸುತ್ತೋಲೆ

ವಿಷಯ: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನಲೆಯಲ್ಲಿ "ಹರ್ ಘರ್ ತಿರಂಗಾ" ಅಭಿಯಾನ ಕಾರ್ಯಕ್ರಮ ಅನುಷ್ಠಾನ ಕುರಿತು.

ಉಲ್ಲೇಖ:
1. ಕೇಂದ್ರ ಸರ್ಕಾರದ ಅರೆ ಸರ್ಕಾರಿ ಪತ್ರಗಳ ಸಂಖ್ಯೆ: 442-22/119/2022-AKAM, ದಿನಾಂಕ :23.05.2022 ಹಾಗೂ ದಿನಾಂಕ : 09.06.2022.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ರವರ ಪತ್ರ ಸಂಖ್ಯೆ : ಇಎನ್ 19 ಅಪಕಾ 2022 ದಿನಾಂಕ : 17.06.2022.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಪತ್ರ ಸಂಖ್ಯೆ : ಮುಕಾ/4316419/2022 ದಿನಾಂಕ : 27.06.2022.
4. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ ರವರ ಪತ್ರ ಸಂಖ್ಯೆ : ಎನರ್ಜಿ 191 ಸಿಓಆರ್‌ಡಿ 2022 ದಿನಾಂಕ : 08.07.2022.

*******

ಅಸಂಖ್ಯಾತ ಹೋರಾಟ, ತ್ಯಾಗ, ಬಲಿದಾನಗಳ ಕಾರಣದಿಂದ ದಾಸ್ಯದ ಸಂಕೋಲೆಯಿಂದ ಬಿಡುಗಡೆಯಾದ ಭಾರತಾಂಬೆಗೆ ಪ್ರಾಪ್ತಿಯಾದ ಸ್ವಾತಂತ್ರ್ಯಕ್ಕೆ ಈಗ ಅಮೃತ ಮಹೋತ್ಸವದ ಸಂಭ್ರಮ. ಈ ಸಂದರ್ಭದಲ್ಲಿ ಅದಕ್ಕೆ ಕಾರಣವಾದ ಎಲ್ಲರನ್ನು ಸದಾ ಸ್ಮರಿಸುವುದು ಹಾಗೂ ಗೌರವಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಇಂದಿನ ನಮ್ಮ ಸಂಭ್ರಮಕ್ಕೆ ತಳಪಾಯವಾಗಿ, ಮೆಟ್ಟಿಲುಗಳಾಗಿ ತಮ್ಮ ಜೀವ-ಜೀವನ ತ್ಯಾಗ ಮಾಡಿದ ಎಲ್ಲರನ್ನು ಮರೆಯದೆ ಸದಾ ಸ್ಮರಿಸುತ್ತಾ ಭವ್ಯ ಭಾರತವನ್ನು ಕಟ್ಟುವಲ್ಲಿ ನಮ್ಮ ಜವಾಬ್ದಾರಿಯುತ ಪಾತ್ರವನ್ನು ನಿರ್ವಹಿಸಬೇಕಿದೆ.

ಭಾರತ ದೇಶದಾದ್ಯಂತ ಸ್ವಾತಂತ್ರ್ಯದ 75 ರ ಸಂಭ್ರಮವನ್ನು ವೈವಿಧ್ಯಮಯವಾಗಿ ಆಚರಿಸಲಾಗುತ್ತಿದೆ. ಈ ಸಂಭ್ರಮದ ಭಾಗವಾಗಿ ಕೇಂದ್ರ ಸರ್ಕಾರವು **"ಹರ್ ಘರ್ ತಿರಂಗಾ"** ಎಂಬ ಘೋಷವಾಕ್ಯದೊಂದಿಗೆ 2022ರ ಆಗಸ್ಟ್ 11 ರಿಂದ 17ರವರೆಗೆ ದೇಶದ **ಪ್ರತಿ ಮನೆ-ಮನೆಯಲ್ಲೂ ರಾಷ್ಟ್ರ ಧ್ವಜವನ್ನು** ಹಾರಿಸಿ ದೇಶ ಭಕ್ತಿ ಬಿಂಬಿಸುವ ಮೂಲಕ ನಮ್ಮ ರಾಷ್ಟ್ರ ಪ್ರೇಮವನ್ನು ಅಭಿವ್ಯಕ್ತಗೊಳಿಸುವಂತೆ ಕರೆ ನೀಡಿ ಅಭಿಯಾನ ಹಮ್ಮಿಕೊಂಡಿದೆ.

ಈ ಹಿನ್ನಲೆಯಲ್ಲಿ, ಕೇಂದ್ರ ಸರ್ಕಾರದ ಉಲ್ಲೇಖ(1)ರ ಪತ್ರದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ **"ಹರ್ ಘರ್ ತಿರಂಗಾ"** ಅಭಿಯಾನವನ್ನು ಅನುಷ್ಠಾನಗೊಳಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ ಹಾಗೂ ಸದರಿ ಅಭಿಯಾನದಲ್ಲಿ

............ 2

ರಾಜ್ಯ ಸರ್ಕಾರದ ಸರ್ಕಾರಿ/ ಅರೆ ಸರ್ಕಾರಿ/ ನಿಗಮ ಮಂಡಳಿಗಳು/ ಸಾರ್ವಜನಿಕ ಉದ್ಯಮಗಳು/ ಸ್ವಸಹಾಯ ಗುಂಪುಗಳು/ ನಾಗರಿಕ ಸಂಸ್ಥೆಗಳು/ ಸಾರ್ವಜನಿಕರು/ ಶಾಲಾ/ ಕಾಲೇಜು ಮಕ್ಕಳು/ ಇತರೆ ಎಲ್ಲಾ ಸಿಬ್ಬಂದಿಗಳು ಹಾಗೂ ಅವರ ಕುಟುಂಬ ವರ್ಗದವರನ್ನು ಸೇರಿ ಸ್ವತಃ ತಾವೇ ಕ್ರಿಯಾಶೀಲವಾಗಿ ಭಾಗವಹಿಸುವಂತೆ ಪ್ರೇರೇಪಿಸಲು ಅಗತ್ಯ ಕ್ರಮವಹಿಸಬೇಕೆಂದು ಹಾಗೂ ಸೂಕ್ತ ನಿರ್ದೇಶನ ನೀಡಲು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಉಲ್ಲೇಖ(3)ರ ಪತ್ರದಲ್ಲಿ ತಿಳಿಸಿರುತ್ತಾರೆ. ಈ ಸಂಬಂಧ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ರವರು ಉಲ್ಲೇಖ(2) & (4)ರ ಪತ್ರಗಳಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಮನೆ-ಮನೆಯಲ್ಲೂ ರಾಷ್ಟ್ರಧ್ವಜ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮೆಸ್ಕಾಂ,ನ ಎಲ್ಲಾ ಕಛೇರಿಗಳು ಹಾಗೂ ಎಲ್ಲಾ ಅಧಿಕಾರಿಗಳು /ನೌಕರರು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಆಚರಿಸಲ್ಪಡುವ **"ಹರ್ ಘರ್ ತಿರಂಗಾ"** ಅಭಿಯಾನವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

1. ಮೆಸ್ಕಾಂ,ನ ಎಲ್ಲಾ ಕಛೇರಿಗಳು, ಅತಿಥಿ ಗೃಹಗಳು ಹಾಗೂ ಇತರ ಕಟ್ಟಡಗಳ ಮೇಲೆ/ಮುಂದೆ ದಿನಾಂಕ 13.08.2022 ರಿಂದ 15.08.2022 ರವರೆಗೆ ರಾಷ್ಟ್ರಧ್ವಜವನ್ನು ಹಾರಿಸಲು ಸೂಚಿಸಿದೆ.
2. ಮೆಸ್ಕಾಂ., ವ್ಯಾಪ್ತಿಯ ಎಲ್ಲಾ ಕಛೇರಿ/ಅತಿಥಿ ಗೃಹಗಳು/ ಇತರ ಕಟ್ಟಡಗಳ ಮೇಲೆ/ಮುಂದೆ ಧ್ವಜ ಸ್ಥಂಭವನ್ನು ಅಳವಡಿಸದಿದ್ದಲ್ಲಿ ಸೂಕ್ತ ಧ್ವಜ ಸ್ಥಂಭವನ್ನು ಅಳವಡಿಸಿ The flag code of India 2002 (as amended in 2021) ರಲ್ಲಿ ನಿಗದಿಪಡಿಸಿರುವ ಅಳತೆಯ ರಾಷ್ಟ್ರ ಧ್ವಜವನ್ನು ಕಡ್ಡಾಯವಾಗಿ ಹಾರಿಸಲು ಕ್ರಮಕೈಗೊಳ್ಳುವುದು. The flag code of India 2002 (as amended in 2021) ರಲ್ಲಿ ನೀಡಿರುವ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. (ಪ್ರತಿ ಲಗತ್ತಿಸಿದೆ)
3. ಕವಿಪ್ರನಿನಿ/ಮೆಸ್ಕಾಂ.,ನ ವಸತಿ ಗೃಹಗಳಲ್ಲಿ ಪಾಸಿಸುತ್ತಿರುವ ಎಲ್ಲಾ ಮೆಸ್ಕಾಂ., ಅಧಿಕಾರಿಗಳು/ ನೌಕರರುಗಳು ತಮ್ಮ ಕುಟುಂಬ ವರ್ಗದವರೊಂದಿಗೆ "ಹರ್ ಘರ್ ತಿರಂಗಾ" ಅಭಿಯಾನದಂತೆ ವಸತಿ ಗೃಹದ ಮೇಲೆ/ಅಂಗಳದಲ್ಲಿ ರಾಷ್ಟ್ರ ಧ್ವಜವನ್ನು ಕಡ್ಡಾಯವಾಗಿ ಹಾರಿಸಿ, ದೇಶಭಕ್ತಿ ಬಿಂಬಿಸುವ ಮೂಲಕ ನಮ್ಮ ರಾಷ್ಟ್ರ ಪ್ರೇಮವನ್ನು ಅಭಿವ್ಯಕ್ತಗೊಳಿಸಲು ಸೂಚಿಸಿದೆ.
4. ಮೆಸ್ಕಾಂ., ಕಂಪೆನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ವಸತಿ ಗೃಹಗಳಲ್ಲಿ ವಾಸಿಸದಿರುವ ಎಲ್ಲಾ ಅಧಿಕಾರಿ/ನೌಕರರುಗಳು ತಮ್ಮ ತಮ್ಮ ಮನೆಯ ಮೇಲೆ/ಮನೆಯ ಅಂಗಳದಲ್ಲಿ ಕುಟುಂಬ ವರ್ಗ ಮತ್ತು ನೆರೆಹೊರೆಯವರನ್ನು ಸೇರಿಸಿ ಸ್ವತಃ ಮುಂದಾಳತ್ವ ವಹಿಸಿ "ಹರ್ ಘರ್ ತಿರಂಗಾ" ಅಭಿಯಾನ ಅನುಷ್ಠಾನಗೊಳಿಸುವಂತೆ ಸೂಚಿಸಿದೆ.
5. ಕಂಪೆನಿಯ ಅಧಿಕಾರಿ/ನೌಕರರು ಈ ಸಂದರ್ಭಗಳಲ್ಲಿ ಕ್ಲಿಕ್ಕಿಸಿದ ಉತ್ತಮ ಗುಣಮಟ್ಟದ ಭಾವಚಿತ್ರಗಳನ್ನು ಅಧಿಕಾರಿ/ನೌಕರರ ಸಂಪೂರ್ಣ ವಿಳಾಸದೊಂದಿಗೆ ಈ ಉದ್ದೇಶಕ್ಕಾಗಿಯೇ ತೆರೆಯಲಾದ ಪ್ರತ್ಯೇಕ ಇ-ಮೇಲ್ ಐಡಿ hgtcmescom@gmail.com ಗೆ ಕಳುಹಿಸುವುದು. ಉತ್ತಮ ಭಾವಚಿತ್ರಗಳನ್ನು ಅಗತ್ಯ ಸಂದರ್ಭಗಳಲ್ಲಿ ಪ್ರಕಟಿಸಲು ಕಂಪೆನಿಯಿಂದ ಕ್ರಮಕೈಗೊಳ್ಳಲಾಗುವುದು.

……………3

6. ಭಾರತ ಸರ್ಕಾರದ ಗೃಹ ವ್ಯವಹಾರಗಳ ಮಂತ್ರಾಲಯದಿಂದ The flag code of India 2002 (as amended in 2021) ಗೆ ತಿದ್ದುಪಡಿಯನ್ನು ತರಲಾಗಿದ್ದು, ಕೈಯಲ್ಲಿ ತಯಾರಿಸಿದ ರಾಷ್ಟ್ರೀಯ ಧ್ವಜ ಅಥವಾ ಯಂತ್ರದಿಂದ ತಯಾರಿಸಿದ ಪಾಲಿಸ್ಟರ್, ಹತ್ತಿ, ಉಣ್ಣೆ, ರೇಷ್ಮೆ, ಖಾದಿ ಬಟ್ಟೆಯಿಂದ ತಯಾರಿಸುವ ರಾಷ್ಟ್ರ ಧ್ವಜವನ್ನು ಹಾರಿಸಬಹುದಾಗಿದೆ.
7. **The flag code of India 2002 ರಲ್ಲಿನ ನಿರ್ದೇಶನಗಳಲ್ಲಿ ಯಾವುದೇ ರೀತಿಯಲ್ಲಿ ಉಲ್ಲಂಘನೆಯಾಗದಂತೆ ಕಾರ್ಯಕ್ರಮವನ್ನು ಆಚರಿಸಲು ಸಂಬಂಧಪಟ್ಟ ಅಧಿಕಾರಿ/ನೌಕರರು ಭಾದ್ಯಸ್ಥರಾಗುತ್ತಾರೆ.**
8. 75ನೇ ಸ್ವಾತಂತ್ರ್ಯೋತ್ಸವದ ಆಚರಣೆಯ ಅಂಗವಾಗಿ ಕಾರ್ಪೊರೇಟ್ ಕಛೇರಿ ಮತ್ತು ವಿಭಾಗೀಯ ಮಟ್ಟಗಳಲ್ಲಿ ಕೆಳಕಂಡಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ತಿಳಿಯಪಡಿಸಿದೆ.
   - ಈ ಉದ್ದೇಶಕ್ಕಾಗಿ ಕಂಪೆನಿಯ ವಲಯ/ವೃತ್ತ ಕಛೇರಿಗಳು ಆಯಾ ವ್ಯಾಪ್ತಿಯ ವಿಭಾಗೀಯ ಕಛೇರಿಗಳೊಂದಿಗೆ ಗುರುತಿಸಿಕೊಳ್ಳುವುದು.
   - ಕಂಪೆನಿಯ ಅಧಿಕಾರಿ/ನೌಕರರಿಗೆ ದೇಶಭಕ್ತಿಗೀತೆ ಗಾಯನ ಸ್ಪರ್ಧೆ, ಭಾಷಣ ಸ್ಪರ್ಧೆ(75ನೇ ಸ್ವಾತಂತ್ರ್ಯೋತ್ಸವದ ಬಗ್ಗೆ) ಹಾಗೂ ಚಿತ್ರಕಲಾ ಸ್ಪರ್ಧೆ(ದೇಶ ಭಕ್ತಿಯನ್ನು ಬಿಂಬಿಸುವ)ಗಳನ್ನು ಕ್ರಮವಾಗಿ ದಿನಾಂಕ 10.08.2022, 11.08.2022 ಹಾಗೂ 12.08.2022 ಗಳಂದು ಹಮ್ಮಿಕೊಂಡು ವಿಜೇತರಿಗೆ ಪ್ರಥಮ (ರೂ.500/-), ದ್ವಿತೀಯ (ರೂ.400/-) ಹಾಗೂ ತೃತೀಯ (ರೂ.300/-) ಬಹುಮಾನಗಳನ್ನು ದಿನಾಂಕ 15.08.2022ರಂದು ಧ್ವಜಾರೋಹಣದ ನಂತರ ವಿತರಿಸುವುದು. ಸದರಿ ಬಹುಮಾನಗಳ ವೆಚ್ಚಗಳನ್ನು ಕಛೇರಿ ಕೈಹಣದಿಂದ ಪಾವತಿಸಲು ಅನುಮೋದಿಸಿದೆ.

**"ಹರ್ ಘರ್ ತಿರಂಗಾ"** ಅಭಿಯಾನದಲ್ಲಿ ಭಾಗವಹಿಸುವಿಕೆ ಮತ್ತು ಜವಾಬ್ದಾರಿಗಳು ಹಾಗೂ ಕಾರ್ಯಕ್ರಮದ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಕಾರ್ಯತಂತ್ರವನ್ನು ರೂಪಿಸಿಕೊಂಡು ಪ್ರತಿ ಮನೆ-ಮನೆಯಲ್ಲೂ ರಾಷ್ಟ್ರ ಧ್ವಜವನ್ನು ಹಾರಿಸಿ ದೇಶ ಭಕ್ತಿ ಬಿಂಬಿಸುವ ಈ ಅಭಿಯಾನವನ್ನು ಯಶಸ್ವಿಗೊಳಿಸುವಂತೆ ತಿಳಿಸಲಾಗಿದೆ.

**ಆದೇಶದ ಮೇರೆಗೆ,**

**ಮಾನ್ಯ ವ್ಯವಸ್ಥಾಪಕ ನಿರ್ದೇಶಕರು,**
**ಮೆಸ್ಕಾಂ,ರವರಿಂದ ಅನುಮೋದಿಸಲ್ಪಟ್ಟಿದೆ.**

Harishchand
28/7/22

**ಪ್ರಧಾನ ವ್ಯವಸ್ಥಾಪಕರು (ಆ&ಮಾಸಂಅ)(ಪ್ರ)**
**ಮೆಸ್ಕಾಂ.**

………… 4

<u>ಪ್ರತಿಗಳು:-</u>

1. ಮುಖ್ಯ ಇಂಜಿನಿಯರ್(ವಿ), ಮೆಸ್ಕಾಂ, ಮಂಗಳೂರು/ಶಿವಮೊಗ್ಗ ವಲಯ.
2. ನಿಯಂತ್ರಣಾಧಿಕಾರಿಗಳು 1&2, ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು.
3. ಅಧೀಕ್ಷಕ ಇಂಜಿನಿಯರ್(ವಿ)(ತಾಂ)/(ಖ)/(ವಾ)/(ಯೋ), ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಮೆಸ್ಕಾಂ, ಕಾ ಮತ್ತು ಪಾ ವೃತ್ತಗಳು.
5. ಅಧೀಕ್ಷಕ ಇಂಜಿನಿಯರ್(ವಿ), ಮೆಸ್ಕಾಂ, ಮಾ.ಸಂ.ಅ ಕೇಂದ್ರ/ ಸ್ಕಾಡಾ & ಡಿಸಿಸಿ ಕೇಂದ್ರ/ಎಂ.ಆರ್.ಟಿ ವೃತ್ತ, ಮಂಗಳೂರು..
6. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಮೆಸ್ಕಾಂ., ಕಾರ್ಪೊರೇಟ್ ಕಚೇರಿ, ಮಂಗಳೂರು.
7. ಕಂಪೆನಿ ಕಾರ್ಯದರ್ಶಿ, ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು.
8. ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಐಟಿ), ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು- **ಮೆಸ್ಕಾಂ ಜಾಲತಾಣದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳುವುದು.**
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ, ಕಾ ಮತ್ತು ಪಾ ವಿಭಾಗಗಳು.
10. ಲೆಕ್ಕಾಧಿಕಾರಿ(ಸಾ.ಸಂ&ಸಂ), ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು - **ಕಾರ್ಪೊರೇಟ್ ಕಛೇರಿಯ ಕಾರ್ಯಕ್ರಮದ ಆಯೋಜನೆಯ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವುದು.**
11. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ, ಕಾ ಮತ್ತು ಪಾ ಉಪವಿಭಾಗಗಳು.

(Items 1–11:) **ಸದರಿ ಕಾರ್ಯಕ್ರಮದ ಕುರಿತು ತಮ್ಮ ಅಧೀನ ಎಲ್ಲಾ ಕಛೇರಿ/ ಅಧಿಕಾರಿ/ ನೌಕರರಿಗೆ ಮಾಹಿತಿ/ ನಿರ್ದೇಶನ ನೀಡುವುದು.**

12. ಹಿರಿಯ ಆಪ್ತ ಕಾರ್ಯದರ್ಶಿ - ವ್ಯನಿ/ನಿ(ತಾಂ), ಮೆಸ್ಕಾಂ.
13. ಆಪ್ತ ಕಾರ್ಯದರ್ಶಿ - ಮು.ಆ.ಅ/ಆ.ಸ(ಆಂ.), ಮೆಸ್ಕಾಂ.